## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ

# Spl. C(Corruption) 1/2017

**ಪ್ರಾಸಾಃ 1 ಚಾಸಾಃ 3**

**ದಿನಾಂಕಃ 19-03-2019**

ಹೆಸರು :- ಆರ್ ವೆಂಕಟಲಕ್ಷ್ಮಮ್ಮ
ಗಂಡನ ಹೆಸರು :- ಲೇಟ್ ವಿ.ಆನಂದ್
ವಯಸ್ಸು :- 51 ವರ್ಷ
ಉದ್ಯೋಗ :- ಆಹಾರ ನಿರೀಕ್ಷಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ,
ವಾಸ ಸ್ಥಳ :- ಕೋಲಾರ.

(ಪ್ರಮಾಣ ವಚನ ಮಾಡಿಸಲಾಯಿತು)

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

**2012** ರಿಂದ ನಾನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಉಪ ನಿರ್ದೇಶಕರ ಕಛೇರಿ ಕೋಲಾರದಲ್ಲಿ ಆಹಾರ ನಿರೀಕ್ಷಕರೆಂದು ಕರ್ತವ್ಯ ನಿರ್ವರಿಸುತ್ತಿದ್ದೇನೆ. ದಿನಾಂಕಃ **26-03-2015** ರಂದು ನಾನು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆಗೆ ಲೋಕಾಯುಕ್ತ ಪೊಲೀಸ್ ರವರು ನನ್ನ ಮೇಲಾಧಿಕಾರಿಗಳಿಗೆ ಒಂದು ಪತ್ರ ಕಳುಹಿಸಿದ್ದರು. ನಮ್ಮ ಮೇಲಾಧಿಕಾರಿಗಳು ನನಗೆ ಅದೇ ದಿನ ಕೋಲಾರದ ಲೋಕಾಯುಕ್ತ ಕಛೇರಿಗೆ ಹೋಗಿ ಪೋಲೀಸ್ ಇನ್ಸ್‌ಪೆಕ್ಟರ್ ಮುಂದೆ ಹಾಜರಾಗುವಂತೆ ತಿಳಿಸಿದರು. ಅದೇ ದಿನ ನಾನು ಸಾಯಂಕಾಲ ಸುಮಾರು **04-30** ಘಂಟೆಗೆ ನಮ್ಮ ಕಛೇರಿಯಿಂದ ಹೊರಟು ಸಾಯಂಕಾಲ **05-00** ಘಂಟೆ ವೇಳೆಗೆ ಕೋಲಾರ ಲೋಕಾಯುಕ್ತ ಪೊಲೀಸ್ ಕಛೇರಿಗೆ ಹಾಜರಾದೆನು. ಸದರಿ ಕಛೇರಿಯಲ್ಲಿ ನನ್ನಂತೆಯೇ ನಾಗೇಶ್, ಭೂಮಾಪನ ಇಲಾಖೆ ಕಛೇರಿ ಕೋಲಾರದಿಂದ ಲೋಕಾಯುಕ್ತ ಪೊಲೀಸ್ ಕಛೇರಿಯಲ್ಲಿ ಹಾಜರಿದ್ದರು. ಲೋಕಾಯುಕ್ತ ಪೊಲೀಸರು ನನಗೆ ಮತ್ತು ನಾಗೇಶ್ ರವರಿಗೆ ಈ ಪ್ರಕರಣದ ವಿಷಯವನ್ನು ತಿಳಿಸಿ ಪ್ರಕರಣದ ಆರೋಪಿ ಚಂದ್ರಪ್ಪ ಇವರ ಮನೆಯ ಶೋಧ ಕಾರ್ಯಕ್ಕೆ ಹೋಗಬೇಕಾಗಿದೆ ಆ ವೇಳೆಗೆ ನಮ್ಮನ್ನು ಪಂಚರಾಗಿ ಕಾರ್ಯ ನಿರ್ವಹಿಸಲು ಕೇಳಿಕೊಂಡಂತೆ ನಾವು ಒಪ್ಪಿಕೊಂಡೆವು. ಕೋಲಾರ ಲೋಕಾಯುಕ್ತ ಕಛೇರಿಯಲ್ಲಿ ನನಗೆ ಮತ್ತು ನಾಗೇಶ್ ರವರಿಗೆ ಮರು ದಿನ ಅಂದರೆ ದಿನಾಂಕಃ **27-03-2015** ರಂದು ಬೆಳಗ್ಗೆ **05-00** ಘಂಟೆಗೆ ತಮ್ಮ ಕಛೇರಿಗೆ ಬರಬೇಕೆಂದು ಲೋಕಾಯುಕ್ತ ಪೊಲೀಸರು ತಿಳಿಸಿದರು.

ದಿನಾಂಕಃ **27-03-2015** ರಂದು ಬೆಳಗಿನ **05-00** ಘಂಟೆಗೆ ನಾನು ಲೋಕಾಯುಕ್ತ ಪೊಲೀಸ್ ಕೋಲಾರಕ್ಕೆ ಹೋದೆನು. ಆ ದಿನ ಬೆಳಗಿನ **05-45** ವೇಳೆಗೆ ನಾನು, ನಾಗೇಶ್ ಹಾಗೂ ಪೊಲೀಸರು ಕೂಡಿ ಜೀಪಿನಲ್ಲಿ ಕೋಲಾರ ಲೋಕಾಯುಕ್ತ ಕಛೇರಿಯಿಂದ ಆರೋಪಿತನ ಮನೆ ಇರುವ ಕೋಲಾರ ಪಟ್ಟಣದಲ್ಲಿಯ ಬೈರೇಗೌಡ ಬಡಾವಣೆಗೆ ಹೊರೆಟೆವು. ಬೆಳಗಿನ **06-00** ಘಂಟೆಗೆ ಆರೋಪಿತನ ಮನೆ ತಲುಪಿದೆವು. ಪೊಲೀಸ್ ಇನ್ಸ್‌ಪೆಕ್ಟರ್ ಬಾಗಿಲನ್ನು ಹೊಡೆದು ತೆಗೆಯಲು ಸೂಚಿಸಿದಾಗ ಆರೋಪಿತನ ಮಗಳು ಹೊರಗೆ ಬಂದಳು. ವಿಚಾರಿಸಿದಾಗ ತನ್ನ ಹೆಸರು ತ್ರಿಶಾಚಂದ್ರ ಎಂದು ಹೇಳಿದಳು. ತ್ರಿಶಾಚಂದ್ರ ತಮ್ಮ ತಂದೆ ಚಂದ್ರಪ್ಪನವರು ಮನೆಯಲ್ಲಿ ಹಾಜರಿಲ್ಲ, ಯೋಗಾಭ್ಯಾಸ ಮಾಡಲು ಹೊರಗಡೆ ಹೋಗಿದ್ದಾರೆಂದು ಹೇಳಿದರು. ಲೋಕಾಯುಕ್ತ ಇನ್ಸ್‌ಪೆಕ್ಟರ್ ರವರು ಆರೋಪಿ ಚಂದ್ರಪ್ಪ ಯೋಗಾಸನ ಮಾಡುತ್ತಿದ್ದ ಸ್ಥಳಕ್ಕೆ ಹೋಗಿ ಅವರನ್ನು ಕರೆದುಕೊಂಡು ಬಂದರು. ಲೋಕಾಯುಕ್ತ ಪೊಲೀಸ್‌ರು ಆರೋಪಿ ಚಂದ್ರಪ್ಪನಿಗೆ ನ್ಯಾಯಾಲಯದಿಂದ ಅವರ ಮನೆಯನ್ನು ಶೋಧ ಕಾರ್ಯ ಮಾಡಲು ಪಡೆದುಕೊಂಡು ಬಂದಿದ್ದ ಸರ್ಚ್ ವಾರೆಂಟ್ ತೋರಿಸಿದರು. ಪೊಲೀಸರು ಸರ್ಚ್ ವಾರೆಂಟ್ ಮೇಲೆ ಆರೋಪಿತನ ಹೆಂಡತಿ ಸಹಿ, ಆರೋಪಿತನ ಸಹಿ ಮತ್ತು ನಮ್ಮ ಸಹಿಗಳನ್ನು ಪಡೆದುಕೊಂಡರು. ಈಗ ತೋರಿಸಿದ ಸರ್ಚ್ ವಾರೆಂಟ್ ಮೇಲೆ ನನ್ನ ಸಹಿ ಇದೆ, ಸರ್ಚ್ ವಾರೆಂಟ್ ನ್ನು ನಿಪಿ-**1** ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ನನ್ನದು, ನನ್ನ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ಆರೋಪಿತನ ಸಹಿ ಇದೆ, ಆರೋಪಿತನ ಈ ಸಹಿಯನ್ನು ನಿಪಿ-**1**(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ಸಾಕ್ಷಿದಾರ ನಾಗೇಶನ ಸಹಿ ಇದೆ, ನಾಗೇಶರವರ ಈ ಸಹಿಯನ್ನು ನಿಪಿ-**1**(ಸಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ಆರೋಪಿತನ ಹೆಂಡತಿ ನಿರ್ಮಲರವರದ್ದು ಇದೆ, ನಿರ್ಮಲರವರ ಈ ಸಹಿಯನ್ನು ನಿಪಿ-**1**(ಡಿ) ಎಂದು ಗುರುತಿಸಲಾಯಿತು. ಲೋಕಾಯುಕ್ತ ಪೊಲೀಸ್‌ರು ಸರ್ಚ್ ವಾರೆಂಟ್ ತೋರಿಸಿದ ಮೇಲೆ ಆರೋಪಿತನ ಮನೆಯ ಶೋಧನೆ ಕಾರ್ಯ ಪ್ರಾರಂಭಿಸಿದರು. ಆರೋಪಿತನ ಆ ಮನೆ **40** ಫೀಟ್ ಇಂಟು **30** ಫೀಟು ನಿವೇಶನದಲ್ಲಿ ಕಟ್ಟಿದ್ದು ಕಾಣಿಸಿತ್ತು. ಆರೋಪಿತನ ಮನೆಯಲ್ಲಿ ಶೋಧ ಕಾರ್ಯದ ವೇಳೆಯಲ್ಲಿ ಈಗ ನ್ಯಾಯಾಲಯದ

ಮುಂದಿರುವ ಆರೋಪಿತನು ಹಾಜರಿದ್ದನು. ಮನೆಯ ಬಾಗಿಲನ್ನು ಪ್ರವೇಶಿಸಿದ ತಕ್ಷಣ ಚಪ್ಪಲ್ ಮತ್ತು ಶೂಗಳನ್ನು ಇಡುವ ವ್ಯವಸ್ಥೆ ಸಲುವಾಗಿ ಇಟ್ಟ ಬಾಕ್ಸ್ ಇತ್ತು. ಆ ಬಾಕ್ಸ್ ನಲ್ಲಿದ್ದ ಶೂ, ಚಪ್ಪಲ್ ಪರಿಶೀಲಿಸಿ ಬರೆದುಕೊಳ್ಳಲಾಯಿತು. ನಂತರ ಮನೆಯ ಹಾಲ್ ನಲ್ಲಿ ಪ್ರವೇಶ ಮಾಡಿದೆವು. ಅಲ್ಲಿದ್ದ ವಸ್ತುಗಳನ್ನು ಪರಿಶೀಲಿಸಿದೆವು. ಹಾಲ್ ನಲ್ಲಿ ಸೋಫಾ ಸೆಟ್, ಟಿವಿ, ಟೀಪಾಯಿ, ಗೋಡೆ ಗಡಿಯಾರ, ಫ್ಲವರ್ ವಾಸ್, ಇದ್ದಂತೆ ನೋಡಿ ಮಹಜರ್ ನಲ್ಲಿ ನಮೂದಿಸಲಾಯಿತು. ನಂತರ ಮನೆಯ ಡೈನಿಂಗ್ ಹಾಲ್ ನಲ್ಲಿ ಪ್ರವೇಶ ಮಾಡಲಾಗಿ, ಅಲ್ಲಿ ಡೈನಿಂಗ್ ಸೆಟ್ ಹಾಗೂ ಇತರೆ ಗೃಹ ಬಳಕೆಯ ವಸ್ತುಗಳು ಇದ್ದಂತೆ ಪರಿಶೀಲಿಸಿ ನಮೂದಿಸಿಕೊಳ್ಳಲಾಯಿತು. ನಂತರ ಅಡುಗೆ ಮನೆಗೆ ಪ್ರವೇಶ ಮಾಡಿ, ಪರಿಶೀಲಿಸಲಾಗಿ ಅಲ್ಲಿ ಗೃಹಪಯೋಗಿ ವಸ್ತುಗಳಾದ ಪ್ಲೇಟುಗಳು, ಅಡುಗೆ ಪಾತ್ರೆಗಳು, ಗ್ಯಾಸ್ ಸ್ಟೋವ್, ವಾಟರ್ ಫಿಲ್ಟರ್ ಇದ್ದಂತೆ ನೋಡಿ ಪಂಚನಾಮೆಯಲ್ಲಿ ನಮೂದಿಸಲಾಯಿತು. ಬೆಡ್ ರೂಮ್ ನಲ್ಲಿ ಹೋಗಿ ಪ್ರವೇಶ ಮಾಡಲಾಗಿ, ಅಲಮೆರಾ, ಬಟ್ಟೆಗಳು, ಮಂಚ, ಹಾಗೂ ಇದ್ದ ಇತರೆ ವಸ್ತುಗಳನ್ನು ಪರಿಶೀಲನೆ ಮಾಡಿ ಮಹಜರ್ ನಲ್ಲಿ ಬರೆದುಕೊಳ್ಳಲಾಯಿತು. ನಂತರ ಮತ್ತೊಂದು ಬೆಡ್ ರೂಮ್ ಪ್ರವೇಶ ಮಾಡಲಾಗಿ ಅಲ್ಲಿ ಮಕ್ಕಳ ಬಟ್ಟೆಗಳು, ಪುಸ್ತಕಗಳು, ಮಂಚ ಇತರೆ ವಸ್ತುಗಳು ಇದ್ದಂತೆ ನೋಡಿ ಮಹಜರ್ ನಲ್ಲಿ ಬರೆದುಕೊಳ್ಳಲಾಯಿತು. ದೇವರ ಕೋಣೆಯಲ್ಲಿ ಪರೀಕ್ಷಿಸಲಾಗಿ ಅಲ್ಲಿ ದೇವರ ಫೋಟೋಗಳು, ಬೆಳ್ಳಿ ದೀಪ, ತೆಂಗಿನ ಕಾಯಿ ಕಳಶ, ಬೆಳ್ಳಿ ಚೆಂಬು, ಬೆಳ್ಳಿ ತಟ್ಟೆ ಹಾಗೂ ಪೂಜಾ ಸಾಮ್ರಾಗ್ರಿಗಳು ಇದ್ದಂತೆ ನೋಡಿ ಮಹಜರ್ ನಲ್ಲಿ ಬರೆಯಲಾಯಿತು. ಬಾತ್ ರೂಮ್ ಪರೀಕ್ಷಿಸಲಾಗಿ, ಬಟ್ಟೆ ಸೋಪು, ಮೈ ಸೋಪು, ಗೀಜರ್, ಗ್ಯಾಸ್ ಸಿಲಿಂಡರ್ ಇತ್ಯಾದಿ ವಸ್ತುಗಳು ಇದ್ದಂತೆ ನೋಡಿ ಪಂಚನಾಮೆಯಲ್ಲಿ ಬರೆಯಲಾಯಿತು. ಬೆಡ್ ರೂಮ್ ನಲ್ಲಿದ್ದ ಬೀರುವಿನಲ್ಲಿ ಸುಮಾರು 142 ಗ್ರಾಂ ನಷ್ಟು ಬಂಗಾರದ ಒಡವೆಗಳು ಇದ್ದವು. ಮನೆಯ ಶೋಧನೆ ಕಾರ್ಯ ಮುಗಿದ ನಂತರ ಮನೆಗೆ ಅಕ್ಕಸಾಲಿಗರನ್ನು ಕರೆಸಿದರು. ಬಂದ ಅಕ್ಕಸಾಲಿಗನ ಹೆಸರು ಬಸವರಾಜ ಎಂದು ಇತ್ತು. ಬಂದಂತಹ ಅಕ್ಕಸಾಲಿಗ ಬಸವರಾಜರವರು ಆರೋಪಿತನ ಮನೆಯ ಶೋಧ ಕಾಲಕ್ಕೆ ಕಂಡು ಬಂದ ಬೆಳ್ಳಿ ಹಾಗೂ ಬಂಗಾರದ ವಸ್ತುಗಳನ್ನು ಮತ್ತು ಆಭರಣಗಳನ್ನು ಪರೀಕ್ಷಿಸಿ ತೂಕ ಮಾಡಿದರು. ಅಕ್ಕಸಾಲಿಗರು ಆ ಬೆಳ್ಳಿ ಮತ್ತು ಬಂಗಾರದ ವಸ್ತುಗಳನ್ನು ಹಾಗೂ ಆಭರಣಗಳನ್ನು ಪರೀಕ್ಷಿಸಿ ಶೋಧ ಕಾರ್ಯದ ದಿನ ಬೆಳ್ಳಿ

ಮತ್ತು ಬಂಗಾರಕ್ಕೆ ಇದ್ದಂತಹ ಬೆಲೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಆರೋಪಿತನ ಮನೆಯಲ್ಲಿದ್ದ ಬೆಳ್ಳಿ ಮತ್ತು ಬಂಗಾರದ ವಸ್ತುಗಳ ಮತ್ತು ಆಭರಣದ ಬೆಲೆಯನ್ನು ನಿಗದಿ ಪಡಿಸಿದರು. ಬೆಡ್‌ರೂಮ್ ನ ಬೀರುವಿನಲ್ಲಿ 48 ಸಾವಿರ ಚಿಲ್ಲರೆ ನಗದು ಹಣ ನೋಟುಗಳ ರೂಪದಲ್ಲಿ ಇದ್ದವು. ಈ ಎಲ್ಲಾ ವಿಷಯಗಳನ್ನು ಪಂಚನಾಮೆಯಲ್ಲಿ ಬರೆಯಲಾಯಿತು. ಶೋಧ ಕಾರ್ಯದಲ್ಲಿ ಕಂಡು ಬಂದ ಬೆಳ್ಳಿ ಬಂಗಾರ ವಸ್ತುಗಳನ್ನು, ಆಭರಣಗಳನ್ನು ಹಾಗೂ ನಗದು ಹಣವನ್ನು ಆರೋಪಿತನಿಗೆ ಸ್ಥಳದಲ್ಲಿಯೇ ಬಿಟ್ಟು ಕೊಡಲಾಯಿತು. ಆರೋಪಿತನ ಮನೆಯ ಶೋಧ ಕಾರ್ಯದಲ್ಲಿ ಕಂಡು ಬಂದ ಕೆಲವು ಕಾಗದಗಳನ್ನು ಅನುಕ್ರಮ ನಂಬರ್ 1 ರಿಂದ 24 ರಲ್ಲಿ ನಮೂದಿಸಿ ಪಂಚನಾಮೆ ವೇಳೆಗೆ ಲೋಕಾಯುಕ್ತ ಪೊಲೀಸರು ಅಮಾನತ್ತು ಪಡಿಸಿಕೊಂಡರು. ಪಂಚನಾಮೆಯಲ್ಲಿ ನಮೂದಿಸಿದ ಅನುಕ್ರಮ ನಂಬರ್ 1 ರಿಂದ 121 ವಸ್ತುಗಳನ್ನು ಆರೋಪಿತನಿಗೆ ಶೋಧ ಕಾರ್ಯ ವೇಳೆಗೆ ಆರೋಪಿತನಿಂದ ಬಾಂಡ್ ಬರೆಸಿಕೊಂಡು ಅವರಿಗೆ ಬಿಟ್ಟು ಕೊಡಲಾಯಿತು. ಈಗ ತೋರಿಸಿದ ಇನ್ಡೆಮ್‌ನಿಟಿ ಬಾಂಡ್ ಪಂಚನಾಮೆ ವೇಳೆಗೆ ಆರೋಪಿತನು ನಮ್ಮ ಸಮ್ಮುಖದಲ್ಲಿ ಬರೆದುಕೊಟ್ಟಿದ್ದು ಇದೆ, ಈ ಇನ್ಡೆಮ್‌ನಿಟಿ ಬಾಂಡನ್ನು ನಿಪಿ-2 ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ನನ್ನದು, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ಆರೋಪಿತನ ಸಹಿ ಇದೆ, ಆರೋಪಿತನ ಈ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ಸಾಕ್ಷಿದಾರ ನಾಗೇಶನ ಸಹಿ ಇದೆ, ನಾಗೇಶರವರ ಈ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಬೆಳಗಿನ 06-00 ಘಂಟೆಯಿಂದ ಮದ್ಯಾಹ್ನ 02-45 ಘಂಟೆವರೆಗೂ ಆರೋಪಿತನ ಮನೆಯಲ್ಲಿ ಶೋಧ ಕಾರ್ಯ ಮಾಡಲಾಯಿತು. ಈಗ ತೋರಿಸಿದ ಜಪ್ತು ಪಂಚನಾಮೆ ನನ್ನ ಮತ್ತು ನನ್ನೊಂದಿಗಿದ್ದ ಸಹ ಪಂಚ ನಾಗೇಶ ರವರ ಸಮ್ಮುಖದಲ್ಲಿ ಮಾಡಿದ್ದು ಇದೆ, ಈ ಜಪ್ತು ಪಂಚನಾಮೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ನನ್ನದು, ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸಹಿ ಸಾಕ್ಷಿದಾರ ನಾಗೇಶನ ಸಹಿ ಇದೆ, ನಾಗೇಶರವರ ಈ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ

ಸಹಿ ಆರೋಪಿ ಚಂದ್ರಪ್ಪನ ಸಹಿ ಇದೆ, ಆರೋಪಿಯ ಸಹಿಯನ್ನು ನಿಪಿ-3(ಸಿ) ಅಂತ ಗುರುತಿಸಲಾಯಿತು. ಆರೋಪಿ ನಿಪಿ-3 ನ್ನು ಪಡೆದುಕೊಂಡ ಬಗ್ಗೆ ಈ ಸಹಿ ಮಾಡಿದ್ದಾರೆ.

(ಆರೋಪಿ ಪರ ವಕೀಲರಾದ ಶ್ರೀ ಎಂಹೆಚ್ ವಕೀಲರು ತಮಗೆ ಅಭಿಯೋಜನೆಯವರು ದೋಷಾರೋಪಣ ಪಟ್ಟಿಯೊಂದಿಗೆ ಆರೋಪಿತನ ಮನೆಯ ಶೋಧ ಕಾರ್ಯದ ವೇಳೆಗೆ ಅಮಾನತ್ತು ಪಡಿಸಿಕೊಂಡಿದ್ದಾರೆಂದು ಹೇಳುವ 1 ರಿಂದ 24 ರ ದಾಖಲೆಗಳನ್ನು ಒಳಗೊಂಡ ಡಿ-96 ರಲ್ಲಿ ವಿವರಿಸಿ ಕೋರ್ಟ್ ಕಾಪಿ-8 ಎಂದು ದೋಷಾರೋಪಣ ಪಟ್ಟಿಯ ವ್ಯಾಲ್ಯುಂ-8 ನೇದರಲ್ಲಿಯ ಕಾಗದಗಳ ಕಾಪಿಗಳನ್ನು ಆರೋಪಿತನಿಗೆ ಕೊಟ್ಟಿಲ್ಲ, ಕಾರಣ ಸದರಿ ದಾಖಲೆಗಳ ಕಾಪಿಗಳನ್ನು ಆರೋಪಿತನಿಗೆ ಪೂರೈಸಿಸದೆ ಆ ದಾಖಲೆಗಳನ್ನು ಗುರುತಿಸಲು ಆಗುವುದಿಲ್ಲ ಎಂದು ತಕರಾರು ಮಾಡಿದ ಕಾರಣ ಹಾಗೂ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಕಾಗದಗಳ ಕಾಪಿಗಳನ್ನು ಆರೋಪಿತನಿಗೆ ಕೊಡುವುದು ಇಲ್ಲ ಎಂದು ನಿವೇದಿಸಿರುತ್ತಾರೆ. ಕಾರಣ ಸದರಿ ದಾಖಲೆಗಳ ಕಾಪಿಗಳನ್ನು ಆರೋಪಿತನಿಗೆ ಪೂರೈಸಬೇಕೋ ಬೇಡವೋ ಎಂಬುದನ್ನು ನಿರ್ಧರಿಸುವವರಿಗೂ ಸಾಕ್ಷಿಯ ಹೆಚ್ಚಿನ ಮುಖ್ಯ ವಿಚಾರಣೆಯನ್ನು ಮುಂದೂಡಬೇಕೆಂದು ಶ್ರೀ ಎಂಹೆಚ್ ವಕೀಲರು ನಿವೇದಿಸಿದಂತೆ ಸಾಕ್ಷಿಯ ಹೆಚ್ಚಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)</u>

ಓ ಹೇ ಕೇ ಸ ಇ

. ಸಹಿ/-

(ಐ.ಎಫ್.ಬಿದರಿ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.